# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 971 |
| 2 | ಸದಸ್ಯರ ಹೆಸರು | : | ಶ್ರೀ ಸುನೀಲ್ ವಲ್ಯಾಪುರ್ (ವಿಧಾನಸಭೆಯಿಂದ ಚುನಾಯಿತರಾದವರು) |
| 3 | ಉತ್ತರಿಸುವ ದಿನಾಂಕ | : | 24.02.2022 |
| 4 | ಉತ್ತರಿಸುವ ಸಚಿವರು | : | ಗೃಹ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿ ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಹುದ್ದೆಗೆ ಪುರುಷ ಮತ್ತು ಮಹಿಳಾ ಅಭ್ಯರ್ಥಿಗಳು ಆಯ್ಕೆಯಾಗಿರುವ ತಾತ್ಕಾಲಿಕ ಪಟ್ಟಿ ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಯಾವ ಉದ್ದೇಶಕ್ಕಾಗಿ ತಡೆಹಿಡಿಯಲಾಗಿದೆ;(ವಿವರ ನೀಡುವುದು) | ತಾತ್ಕಾಲಿಕ ಆಯ್ಕೆ ಪಟ್ಟಿಯು ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.<br>ಪೊಲೀಸ್ ಸಬ್-ಇನ್ಸ್‌ಪೆಕ್ಟರ್ (ಸಿವಿಲ್)-545 (438 ಎನ್‌ಕೆಕೆ & 107 ಕೆಕೆ ಹುದ್ದೆಗಳ ನೇಮಕಾತಿ ಪ್ರಕ್ರಿಯೆಯನ್ನು ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳು ಮತ್ತು ಸರ್ಕಾರದ ಸುತ್ತೋಲೆ ಸಂಖ್ಯೆ:ಸಿಆಸುಇ 3 ಹೈಕಕೋ 2018, ದಿನಾಂಕ: 6.06.2020ರನ್ವಯ ಕೈಗೊಳ್ಳಲಾಗಿದ್ದು, ಸದರಿ ನಿಯಮಗಳಂತೆ ಆಯ್ಕೆ ಪ್ರಕ್ರಿಯೆಯನ್ನು ನಡೆಸಲಾಗಿರುತ್ತದೆ.<br>ದಿನಾಂಕ: 19.01.2022 ರಂದು ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಪ್ರಕಟಿಸಿದ ನಂತರ ಕಲ್ಯಾಣ ಕರ್ನಾಟಕ ಪ್ರದೇಶದ ಕೆಲವು ಅಭ್ಯರ್ಥಿಗಳು ತಾತ್ಕಾಲಿಕ ಆಯ್ಕೆ ಪಟ್ಟಿಗೆ ಆಕ್ಷೇಪಣೆ / ಮನವಿಗಳನ್ನು ಸಲ್ಲಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ಸರ್ಕಾರದ ಆದೇಶ ಸಂಖ್ಯೆ: ಒಇ 21 ಪಿಇಐ 2022, ದಿನಾಂಕ: 15.02.2022ರಲ್ಲಿ ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಒಳಾಡಳಿತ ಇಲಾಖೆ, ಡಿಜಿ ಮತ್ತು ಐಜಿಪಿ ಹಾಗೂ ಸರ್ಕಾರದ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ರವರುಗಳನ್ನೊಳಗೊಂಡಂತೆ ಉನ್ನತ ಮಟ್ಟದ ಸಮಿತಿಯನ್ನು ರಚಿಸಲಾಗಿರುತ್ತದೆ. ಈ ಸಮಿತಿಯು 545 ಪಿ.ಎಸ್.ಐ ಹುದ್ದೆಯ ನೇಮಕಾತಿಯ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಸಿಆಸು ಇಲಾಖೆಯು ಕಾಲಕಾಲಕ್ಕೆ ಹೊರಡಿಸಿರುವ ಸುತ್ತೋಲೆಗಳನ್ವಯ ಪರಿಶೀಲಿಸಿ ನೇಮಕಾತಿ ಪ್ರಕ್ರಿಯೆಯನ್ನು ನಡೆಸಲಾಗಿದೆಯೇ? ಎಂಬ ಬಗ್ಗೆ ವರದಿ ಸಲ್ಲಿಸಲು ಸೂಚಿಸಲಾಗಿದೆ. |
| (ಆ) | ರಾಜ್ಯದ ಇತರೆ ಜಿಲ್ಲೆಗಳ ಅಭ್ಯರ್ಥಿಗಳಿಗಿಂತ ಹೆಚ್ಚು ಅಂಕ ಗಳಿಸಿದ ಕಲ್ಯಾಣ ಕರ್ನಾಟಕ ಅಭ್ಯರ್ಥಿಗಳನ್ನು ಸಾಮಾನ್ಯ ಕೆಟಗರಿಯಲ್ಲಿ ಆಯ್ಕೆ ಮಾಡುವ ಬದಲು ಸಂವಿಧಾನದ 371(ಜೆ) ಮೀಸಲು ಅಡಿ ಆಯ್ಕೆ ಮಾಡಿರುವುದರಿಂದ, ಕಲ್ಯಾಣ ಕರ್ನಾಟಕದ ಅಭ್ಯರ್ಥಿಗಳಿಗೆ ಅನ್ಯಾಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಇದನ್ನು ಸರಿಪಡಿಸಲು ಸರ್ಕಾರ ಕೈಗೊಂಡ ಕ್ರಮಗಳೇನು;(ವಿವರ ನೀಡುವುದು) | |
| (ಇ) | ಸರ್ಕಾರವು 371(ಜೆ) ಅಡಿಯಲ್ಲಿ ಗೃಹ ಇಲಾಖೆಯ ಅಡಿಯಲ್ಲಿ ಬರುವ ಯಾವ ಯಾವ ಹುದ್ದೆಗಳನ್ನು ಭರ್ತಿ ಮಾಡಲಾಗಿದೆ? ವಿವರ ನೀಡುವುದು) | ಸರ್ಕಾರದ 371 (ಜೆ) ರನ್ವಯ ಪೊಲೀಸ್ ಇಲಾಖೆಯಿಂದ ಇಲ್ಲಿಯವರೆಗೂ ಭರ್ತಿಮಾಡಲಾಗಿರುವ ವಿವಿಧ ಹುದ್ದೆಗಳ ವಿವರವನ್ನು ಅನುಬಂಧ-ಅ ರಲ್ಲಿ ನೀಡಲಾಗಿರುತ್ತದೆ. |

ಸಂಖ್ಯೆ: ಒಇ 33 ಪಿಇಐ 2022

(ಆರಗ ಜ್ಞಾನೇಂದ್ರ)
ಗೃಹ ಸಚಿವರು

# "ಅನುಬಂಧ-ಅ"

2014-15ನೇ ಸಾಲಿನಿಂದ ಇಲ್ಲಿಯವರೆಗೂ ಸರ್ಕಾರದ 371 (ಜೆ) ರನ್ವಯ ಪೊಲೀಸ್ ಇಲಾಖೆಯಿಂದ ಭರ್ತಿಮಾಡಲಾಗಿರುವ ವಿವಿದ ಹುದ್ದೆಗಳ ವಿವರ

## ಪೊಲೀಸ್ ಸಬ್-ಇನ್ಸ್‌ಪೆಕ್ಟರ್

| ಕ್ರಮ ಸಂಖ್ಯೆ | ವೃಂದ | 2014-15 | 2015-16 | 2016-17 | 2017-18 | 2018-19 | 2019-20 | 2020-21 | ಒಟ್ಟು |
|---|---|---|---|---|---|---|---|---|---|
| 1 | ಪೊಲೀಸ್ ಸಬ್-ಇನ್ಸ್‌ಪೆಕ್ಟರ್ (ಸಿವಿಲ್) | 18 | 46 | 82 | – | 25 | 12 | 107 | **290** |
| 2 | ಸಶಸ್ತ್ರ ಸಬ್-ಇನ್ಸ್‌ಪೆಕ್ಟರ್ (ಸಿಎಆರ್/ಡಿಎಆರ್) | 4 | 13 | 10 | 1 | 15 | 4 | 5 | **52** |
| 3 | ಪೊಲೀಸ್ ಸಬ್-ಇನ್ಸ್‌ಪೆಕ್ಟರ್ (ವೈರ್‌ಲೆಸ್) | 2 | 18 | – | – | – | – | – | **20** |
| 4 | ವಿಶೇಷ ಮೀಸಲು ಸಬ್-ಇನ್ಸ್‌ಪೆಕ್ಟರ್ (ಕೆಎಸ್‌ಆರ್‌ಪಿ) | 18 | 8 | 4 | – | – | 7 | – | **37** |
| 5 | ಸಬ್-ಇನ್ಸ್‌ಪೆಕ್ಟರ್ (ಕೆ.ಎಸ್.ಐ.ಎಸ್.ಎಫ್) | – | – | – | 1 | 1 | – | – | **2** |
| 6 | ಪೊಲೀಸ್ ಸಬ್-ಇನ್ಸ್‌ಪೆಕ್ಟರ್ (ಎಫ್.ಪಿ.ಬಿ) | – | – | 2 | 1 | 1 | – | – | **4** |
| 7 | ಪೊಲೀಸ್ ಸಬ್-ಇನ್ಸ್‌ಪೆಕ್ಟರ್ (ರಾಜ್ಯ ಗುಪ್ತವಾರ್ತೆ) | – | – | 3 | 3 | 2 | – | – | **8** |
| 8 | ಡಿಟೆಕ್ಟಿವ್ ಸಬ್-ಇನ್ಸ್‌ಪೆಕ್ಟರ್ (ಸಿ.ಐ.ಡಿ) | – | – | 1 | 1 | 1 | – | – | **3** |
| | ಒಟ್ಟು | **42** | **85** | **102** | **7** | **45** | **23** | **112** | **416** |

## ಪೊಲೀಸ್ ಕಾನ್ಸ್‌ಟೇಬಲ್

| ಕ್ರಮ ಸಂಖ್ಯೆ | ವೃಂದ | 2014-15 | 2015-16 | 2016-17 | 2017-18 | 2019-20 | 2020-21 | 2021-22 | ಒಟ್ಟು |
|---|---|---|---|---|---|---|---|---|---|
| **1** | ಪೊಲೀಸ್ ಕಾನ್ಸ್‌ಟೇಬಲ್ (ನಾಗರಿಕ) | 993 | 490 | 136 | 1313 | 163 | 558 | 484 | **4137** |
| **2** | ಸಶಸ್ತ್ರ ಪೊಲೀಸ್ ಕಾನ್ಸ್‌ಟೇಬಲ್ (ಸಿಎಆರ್ / ಡಿಎಆರ್) | – | 246 | 72 | 450 | 159 | 444 | – | **1371** |
| **3** | ವಿಶೇಷ ಮೀಸಲು ಪೊಲೀಸ್ ಕಾನ್ಸ್‌ಟೇಬಲ್ (ಕೆಎಸ್‌ಆರ್‌ಪಿ) | – | 259 | 4 | 274 | 218 | 40 | – | **795** |
| **4** | ವಿಶೇಷ ಮೀಸಲು ಪೊಲೀಸ್ ಕಾನ್ಸ್‌ಟೇಬಲ್ (ಐಆರ್‌ಬಿ) | – | – | – | 319 | – | – | – | **319** |
| **5** | ಪೊಲೀಸ್ ಕಾನ್ಸ್‌ಟೇಬಲ್ (ವೈರ್‌ಲೆಸ್) | 120 | 24 | 17 | – | – | – | – | **161** |
| **6** | ಪೊಲೀಸ್ ಕಾನ್ಸ್‌ಟೇಬಲ್ (ಎಫ್.ಪಿ.ಬಿ) | – | – | – | 3 | – | – | – | **3** |
| **7** | ಪೊಲೀಸ್ ಕಾನ್ಸ್‌ಟೇಬಲ್ (ಕೆ.ಎಸ್.ಐ.ಎಸ್.ಎಫ್) | – | – | – | – | – | – | – | **0** |
| | **ಒಟ್ಟು** | **1113** | **1019** | **229** | **2359** | **540** | **1042** | **484** | **6786** |

## ವಿಧಿ ವಿಜ್ಞಾನ ಪ್ರಯೋಗಾಲಯ

| ಕ್ರಮ ಸಂಖ್ಯೆ | ವೃಂದ | 2019-20 | 2020-21 | ಒಟ್ಟು |
|---|---|---|---|---|
| 1 | ವೈಜ್ಞಾನಿಕ ಅಧಿಕಾರಿ | 4 | – | 4 |
| 2 | ಇ.ಇ.ಜಿ ತಂತ್ರಜ್ಞರು | – | 1 | 1 |
| 3 | ಪ್ರಯೋಗಾಲಯದ ಸೇವಕರು | – | 7 | 7 |
| 4 | ಅಪರಾಧ ಸ್ಥಳ ಪರಿಶೀಲನಾ ಅಧಿಕಾರಿ (ಸೀನ್ ಆಫ್ ಕ್ರೈಂ ಆಫೀಸರ್) (SOCO) | – | – | – |
| ಒಟ್ಟು | | 4 | 8 | 12 |